# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 155/2024**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 09-04-2025 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ ಧರ್ಮಗೌಡ ಪಾಟೀಲ | **ಪ್ರಾ.ಸಾ ಃ 02** |
| **ತಂದೆ ಃ ಗಂಡ ಹೆಸರು** | ಃ ಬಸನಗೌಡ | **ಚಾ.ಸಾ ಃ 01** |
| **ವಯಸ್ಸು** | ಃ 59 ವರ್ಷ | |
| **ಉದ್ಯೋಗ** | ಃ ಸಹಾಯಕ ಆರಕ್ಷಕ ಉಪನಿರೀಕ್ಷಕರು | |
| **ವಾಸಸ್ಥಳ** | ಃ ಕಲಘಟಗಿ | |

**<u>ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ</u>**

ನಾನು 2022 ರಿಂದ ಇಲ್ಲಿಯವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಸಹಾಯಕ ಆರಕ್ಷಕ ಉಪನಿರೀಕ್ಷಕರು ಎಂದು ಕರ್ತವ್ಯನಿರ್ವಹಿಸುತ್ತಿದ್ದೇನೆ.

ದಿನಾಂಕ 05-09-2022 ರಂದು ಗಣೇಶ ಚತುರ್ತಿ ನಿಮಿತ್ಯ ಚಾಸಾ-4 ಮತ್ತು 5 ರವರ ಜೊತೆಗೆ ಇಲಾಖಾ ವಾಹನದಲ್ಲಿ ಗುಡಿಹಾಳ ಗ್ರಾಮದಲ್ಲಿ ಗಸ್ತು ಕರ್ತವ್ಯ ನಿರ್ವಹಿಸುತ್ತಿದ್ದಾಗ ರಾತ್ರಿ 8-10 ರ ಸುಮಾರಿಗೆ ನಮ್ಮ ಠಾಣೆಯ ನಿರೀಕ್ಷಕರು ಕರೆ ಮಾಡಿ ಜೋಡಳ್ಳಿ ಕಡೆಯಿಂದ ಗಂಬ್ಯಾಪುರ ಕಡೆಗೆ ಒಬ್ಬ ವ್ಯಕ್ತಿ ಒಂದು ದ್ವಿಚಕ್ರ ವಾಹನದಲ್ಲಿ ಚೀಲದಲ್ಲಿ ಮದ್ಯವನ್ನು ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿದ್ದಾನೆಂದು ಮಾಹಿತಿ ಬಂದಿದ್ದು ದಾಳಿ ಮಾಡುವಂತೆ ತಿಳಿಸಿರುತ್ತಾರೆ. ನಾವು ತಕ್ಷಣ ಗಂಬ್ಯಾಪುರ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ಹೋಗಿದ್ದು ಮಾರ್ಗ ಮದ್ಯದಲ್ಲಿ ಚಾಸಾ-2 ಮತ್ತು 3 ರವರನ್ನು ಕರೆದು ಅವರಿಗೆ ಬಾತ್ಮಿ ವಿಷಯ ತಿಳಿಸಿ ಪಂಚನಾಮೆಗೆ ಸಹಕರಿಸುವಂತೆ ಕೇಳಿರುತ್ತೇನೆ ಅವರು ಒಪ್ಪಿಕೊಂಡಿರುತ್ತಾರೆ. ನಂತರ ಹಾಗೂ ಪಂಚರೊಂದಿಗೆ ಗಂಬ್ಯಾಪುರ ಗ್ರಾಮದ ಬಸ್ಸ ನಿಲ್ದಾಣದ ಹತ್ತಿರ ರಾತ್ರಿ 9-00 ಗಂಟೆಗೆ ನಿಂತಿದ್ದು ಮೋಟರ ಸೈಕಲ ಹಾಗೂ ಚೀಲ ಇದ್ದ ವ್ಯಕ್ತಿ ಬಂದಿದ್ದು ಆತನನ್ನು ತಡೆದು ನಿಲ್ಲಿಸಿ ಪರಿಶೀಲನೆ ಮಾಡಿದಾಗ ಚೀಲದಲ್ಲಿ ಓರಿಜನ್ ಚಾಯ್ಸನ 90 ಮಿಲೀಯ 48 ಟೆಟ್ರಾ ಪ್ಯಾಕೆಟಗಳು, ಗ್ರೀನ್ ವಿಸ್ಕಿ 90 ಮೀಲಿಯ 24 ಟೆಟ್ರಾ ಪ್ಯಾಕೇಟಗಳುಸಿಕ್ಕಿರುತ್ತವೆ. ಈ ಬಗ್ಗೆ ಪರವಾನಿಗೆ ಇರುವ ಬಗ್ಗೆ ಕೇಳಲಾಗಿ ಇರುವುದಿಲ್ಲ ಎಂದು ಸದರಿ ವ್ಯಕ್ತಿ ತಿಳಿಸಿರುತ್ತಾನೆ. ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ ತನ್ನ ಹೆಸರು ಮಲ್ಲಿಕಾರ್ಜುನ ಗುರುಸಿದ್ದಪ್ಪ ಚಿಕ್ಕಮಠ ಎಂದು ತಿಳಿಸಿರುತ್ತಾನೆ. ಮೋಟರ ಸೈಕಲ ನಂ ಕೆಎ 32/ಇಪಿ2036 ಬಜಾಜ ಕಂಪನಿಯ ವಾಹನ ಇತ್ತು. ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಜರುಗಿಸಿ ದೊರೆತ ಮಾಲನ್ನು ಒಂದು ಬಿಳಿ ಬಟ್ಟೆ ಸುತ್ತಿ ಪಂಚರ ಹಾಗೂ ನನ್ನ ಸಹಿಯುಳ್ಳ ಮಾದರಿ ಮೊಹರಿನ ಚೀಟಿ ಅಂಟಿಸಿ ರಾಸಾಯನಿಕ ಪರೀಕ್ಷೆ ಕುರಿತು ಜಪ್ತಿ ಪಡಿಸಿಕೊಂಡಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯನ್ನು ರಾತ್ರಿ 9-10 ರಿಂದ 10-10 ರವರೆಗೆ ಜರುಗಿಸಿರುತ್ತೇನೆ. ನಂತರ ಠಾಣೆಗೆ ಬಂದು ಸರಕಾರದ ಪರವಾಗಿ ದೂರು ಸಲ್ಲಿಸಿರುತ್ತೇನೆ. ಆರೋಪಿ ಹಾಗೂ ಮಾಲನ್ನು

ಠಾಣೆಗೆ ತೆಗೆದುಕೊಂಡು ಹೋಗಿರುತ್ತೇನೆ. ದೂರನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-2, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಾದರಿ ಮೊಹರಿನ ಚೀಟಿಯನ್ನು ನೋಡಿ ಸಾಕ್ಷಿ ಗುರಿತಿಸಿದ್ದು ಅದನ್ನು ನಿಪಿ-3, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ದಾಳಿ ಸಮಯದಲ್ಲಿ ಜಪ್ತಿ ಪಡಿಸಿಕೊಂಡ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಜಪ್ತಿ ಪಡಿಸಿಕೊಂಡ ಓರಿಜನಲ್ ಚಾಯ್ಸ ಮತ್ತು ಮ್ಯಾಕೀನತೋಷ, ಟೆಟ್ರಾ ಪ್ಯಾಕೇಟಗಳನ್ನು ಒಟ್ಟಾಗಿ ಮುದ್ದೆಮಾಲು 1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ ಜಿ ಪಿ ವಕೀಲರಿಂದ:**

ಗುನ್ನಾ ಸ್ಥಳದ ಚಕ್ಕಬಂದಿ ಗೊತ್ತಿದೆ. ಉತ್ತರಕ್ಕೆ ಧಾರವಾಡ ರಸ್ತೆ, ದಕ್ಷಿಣ ಕಲಘಟಗಿ ರಸ್ತೆ, ಪೂರ್ವಕ್ಕೆ ಬಸ್ಸ ನಿಲ್ದಾಣ, ಪಶ್ಚಿಮಕ್ಕೆ ಖಾಲಿ ಜಾಗೆ. ಚಾಸಾ-2 ಮತ್ತು 3 ನಮ್ಮ ಠಾಣೆಯ ಖಾಯಂ ಪಂಚರು ಅಂದರೆ ಸರಿಯಲ್ಲ. ಮಾಹಿತಿ ಬಂದ 20 ನಿಮಿಷಗಳ ನಂತರ ಗುನ್ನೆ ಸ್ಥಳಕ್ಕೆ ಹೋಗಿರುತ್ತೇನೆ. ಗುನ್ನೆ ಸ್ಥಳ ಬಸ್ಸ ನಿಲ್ದಾಣ ಆಗಿರುವುದರಿಂದ ಅಲ್ಲಿ ಸಾಕಷ್ಟು ಜನ ಇರುತ್ತಾರೆ ಅಂದರೆ ಸರಿಯಲ್ಲ. ಸ್ಥಳದಲ್ಲಿ ಜನರು ಇದದರೂ ಕೂಡಾ ಅಲ್ಲಿ ಯಾರು ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾಳಿ ಮಾಡುವ ಸಲುವಾಗಿ ಗುನ್ನೆ ಸ್ಥಳಕ್ಕೆ ಪಂಚರೊಂದಿಗೆ ಎಂದಿಗೂ ಹೋಗಿಲ್ಲ ಅಂದರೆ ಸರಿಯಲ್ಲ. ಆರೋಪಿಯಿಂದ ಮುದ್ದೆಮಾಲನ್ನು ಜಪ್ತಿ ಪಡಿಸಿಕೊಂಡಿದ್ದೇನೆ ಹಾಗೂ ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಠಾಣೆಯ ಅಂಕಿಸಂಖ್ಯೆಗೋಸ್ಕರ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.